ಬಾಗಲಕೋಟೆ ಸಿಮೆಂಟ್ ಕಾರ್ಖಾನೆಯಂ ಬ್ಲಾಸ್ಟಿಂಗ್ ಬಗ್ಗೆ

೯೦. ಶ್ರೀ ಬಾಬುರೆಡ್ಡಿ ತುಂಗಳ್ (ಬೇಳಗಿ). —ಮಾನ್ಯ ಗಣಿ ಮಂತ್ರಿ ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ಬಾಗಲಕೋಟೆಯಲ್ಲಿರುವ ಸಿಮೆಂಟ್ ಕಾರ್ಖಾನೆಯವರು ಕಲ್ಲು ಅಗಿಯುವುದಕ್ಕಾಗಿ ಭಾರಿ ಸ್ಫೋಟಕಗಳನ್ನು ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೨. ಈ ಭಾರಿ ಸ್ಫೋಟಕಗಳಿಂದಾಗಿ ಬಾಗಲಕೋಟೆ ನಗರದಲ್ಲಿನ ಅನೇಕ ಕಟ್ಟಡಗಳಿಗೆ ಭಾರೀ ಜಖಂ ಆಗಿರುವುದು ಮತ್ತು ಈ ಬಗ್ಗೆ ಸಾರ್ವಜನಿಕರಂ ದೂರು ಕೊಟ್ಟಿರುವುದು ಸರ್ಕಾರದವರಿಗೆ ತಿಳಿದಿದೆಯೆ ?

೩. ಹಾಗಿದ್ದಲ್ಲಿ ಈ ಸ್ಫೋಟಕಗಳಿಂದಾಗಂವ ಅಪಾಯಗಳ ಬಗ್ಗೆ ಕಾರ್ಖಾನೆಯವರ ವಿರುದ್ಧ ಕೈಗೊಂಡ ಕ್ರಮಗಳೇನು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು).—

೧. ಬಂದಿದೆ,

೨. ತಿಳಿದಿದೆ.

೩. ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗಿದೆ,

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿಯಲ್ಲಿ ಆಸ್ಫೋಟಗಳನ್ನು ಸಿಡಿಸುವ ಬಗ್ಗೆ ನಾನಂ ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಾದರೆ ಈ ಸಿಮೆಂಟ್ ಫ್ಯಾಕ್ಟರಿಯಲ್ಲಿ ಕಲ್ಲು ಅಗಿಯುವುದಕ್ಕಾಗಿ ಭಾರಿ ಪ್ರಮಾಣದ ಆಸ್ಫೋಟಗಳನ್ನು ಸಿಡಿಸುವುದಕ್ಕೆ ಸಮಯವಿಲ್ಲ. ಇವರಂ ಆಸ್ಫೋಟವನ್ನು ಸಿಡಿಸಿದಾಗ ಇಡೀ ನಗರ ನಡುಗುತ್ತಿದೆ. ನಾನಂ ಕಳೆದ ೩ ದಿವಸಗಳ ಹಿಂದೆ ವೈದ್ಯಾಧೀಕಾರಿಯವರನ್ನು ಕಾಣಲು ಹೋಗಿದ್ದೆ. ಅಲ್ಲಿ ಇರುವ ಟೇಬಲ್ ಕುರ್ಚಿ ಎಲ್ಲಾ ಅಲುಗಾಡುತ್ತಿದ್ದವು. ಈಗ ನಾನು ಆ ವೈದ್ಯಾಧಿಕಾರಿಗಳನ್ನು ಕೇಳಿದ್ದಕ್ಕೆ ಅವರಂ ಹೇಳಿದರು ಇದು ನವಂಗೆ ರೂಢಿಯಾಗಿಬಿಟ್ಟಿದೆ ಎಂದು ಇದು ನಿಮಗೆ ಹೊಸದು ಇರಬಹುದು. ಈ ಸಿಮೆಂಟ್ ಫ್ಯಾಕ್ಟರಿಯವರು ಆಸ್ಫೋಟವನ್ನು ಸಿಡಿಸಂವ ಮುಂಚಿತವಾಗಿ ಯಾವುದೇ ರೀತಿಯ ಸೂಚನೆಯನ್ನು ಸಹ ನಗರದ ಜನರಿಗೆ ಕೊಡುವುದಿಲ್ಲ. ಈ ರೀತಿ ಆಸ್ಫೋಟವನ್ನು ಸಿಡಿಸಿರುವುದರಿಂದ ಬಾಗಲಕೋಟೆಯಲ್ಲಿ ಅನೇಕ ಮನೆಗಳು ಬಿರುಕು ಬಿಟ್ಟವೆ. ಆದರೆ ತಾವು ತಮ್ಮ ಉತ್ತರದಲ್ಲಿ ಹೇಳಿದ್ದೀರಿ ಈ ಬಗ್ಗೆ ನಾವು ಪರಿಣಾಮಕಾರಿಯಾದ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆಂದು

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಭಾಷಣ ಮಾಡುತ್ತಿದ್ದಾರೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನಾನಂ ಭಾಷಣ ಮಾಡುತ್ತಿಲ್ಲ. ಪ್ರಶ್ನೆ ಕೇಳುತ್ತಿದ್ದೇನೆ. ಭಾಷಣ ಮಾಡಿ ಎಂದರೆ ನನಗೂ ಭಾಷಣ ಮಾಡುವುದಕ್ಕೆ ಬರುತ್ತದೆ.

ಅಧ್ಯಕ್ಷರು.—ಆಯಿತಂ ನೀವು ಪ್ರಶ್ನೆ ಕೇಳಿ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನಾನು ಮಾನ್ಯ ಮಂತ್ರಿಗಳನ್ನು ಕೇಳುವುದೇನೆಂದರೆ ಪರಿಣಾಮಕಾರಿಯಾದ ಕಾರ್ಯಕ್ರಮ ಕೈಗೊಳ್ಳುತ್ತೇನೆಂದು ಹೇಳಿದ್ದೀರಿ, ಯಾವಾಗ ಕಾರ್ಯಕ್ರಮ ಕೈಗೊಳ್ಳುತ್ತೀರಿ ?

ಶ್ರೀ ರಮೇಶ್ ಸಿ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ ಆದಷ್ಟುಬೇಗ ಅಲ್ಲಿಗೆ ಹಿರಿಯ ಅಧಿಕಾರಿಗಳನ್ನು ಕಳುಹಿಸಿ ತೊಂದರೆಯಾಗಿದ್ದರೆ ತಕ್ಷಣ ಆ ಕೆಲಸವನ್ನು ನಿಲ್ಲಿಸುವಂತೆ ಹೇಳುತ್ತೇನೆ. ಆಮೇಲೆ ಅಲ್ಲಿ ಈಗಾಗಲೇ ಆಸ್ಪಿಪಾಸ್ಟುಗಳಿಗೆ ತೊಂದರೆಯಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದರು, ಆ ಬಗ್ಗೆ ಅಲ್ಲಿ ನಾವು ಒಂದು ಕಮಿಟಿಯನ್ನು ಮಾಡಿದ್ದೇವೆ. ಆ ಕಮಿಟಿಗೆ ಇದನ್ನು ರೆಫರ್ ಮಾಡಿದರೆ ಅವರು ಪರಿಶೀಲನೆ ಮಾಡಿ ಪರಿಹಾರ ಕೊಡುತ್ತಾರೆ.